ಅವುಗಳ ಪರಿಹಾರಕ್ಕೆ ರಾಜ್ಯಮಟ್ಟದಲ್ಲಿ ಕ್ರಿಯಾಶೀಲವಾದ ಮೊದಲ ಸಂಘಟನೆ 'ಕನ್ನಡ ಶಕ್ತಿ ಕೇಂದ್ರ'. ಅದರಲ್ಲಿಯೂ 'ಕನ್ನಡ ಶಕ್ತಿ ಕೇಂದ್ರ' ಆಚರಿಸಿದ 'ಕನ್ನಡ ಉಳಿಸಿ ವರ್ಷ' ಅನನ್ಯವಾದದ್ದು. 1990ರಲ್ಲಿ 'ಕನ್ನಡ ಚಳವಳಿ ಸಾಗಬೇಕಾದ ದಾರಿ' ಎಂಬ ವಿಚಾರ ಸಂಕಿರಣ ನಡೆಸಿತು. ಗೋಪಾಲಕೃಷ್ಣ ಅಡಿಗರು ಉದ್ಘಾಟಿಸಿದ ಆ ಗೋಷ್ಠಿಯಲ್ಲಿ ಎಲ್.ಎಸ್. ಶೇಷಗಿರಿರಾವ್ ಅವರು, ''ಕನ್ನಡ ಚಳವಳಿ ಕೆಲವು ನಗರಗಳಿಗೆ ಮಾತ್ರ ಸೀಮಿತಗೊಂಡರೆ ಸಾಲದು, ಕರ್ನಾಟಕದ ಎಲ್ಲ ಪಟ್ಟಣಗಳಿಗಾದರೂ ವಿಸ್ತರಿಸಬೇಕು. ಕನ್ನಡನಾಡು –ನುಡಿ ಎದುರಿಸುತ್ತಿರುವ ಸಮಸ್ಯೆಗಳು, ಪರಿಹಾರೋಪಾಯಗಳನ್ನು ವ್ಯಾಪಕ ನೆಲೆಯಲ್ಲಿ ತಿಳಿಸಲು 'ಕನ್ನಡ ಉಳಿಸಿ ವರ್ಷ' ಕಾರ್ಯಕ್ರಮವನ್ನು ರೂಪಿಸಬೇಕು'' ಎಂದು ಸೂಚಿಸಿದರು.

ಆ ಸಲಹೆಯನ್ನು ಗಂಭೀರವಾಗಿ ಪರಿಗಣಿಸಿದ 'ಕನ್ನಡ ಶಕ್ತಿ ಕೇಂದ್ರ'ವು ನವೆಂಬರ್ 1990ರಿಂದ 'ಕನ್ನಡ ಉಳಿಸಿ ವರ್ಷ'ವನ್ನು ಆಚರಿಸಿ, 'ಕನ್ನಡ–ಕನ್ನಡಿಗ–ಕರ್ನಾಟಕ' ಎಂಬ ಪುಸ್ತಕವನ್ನು ಪ್ರಕಟಿಸಿತು (ಸಂ: ಎಲ್‌ಎಸ್‌ಎಸ್, ಗೊರುಚ, ರಾನಂಚ). ಆ ಕೃತಿಯನ್ನು ಎಸ್.ಎಲ್. ಭೈರಪ್ಪ 'ಕನ್ನಡಿಗರ ಅನಧಿಕೃತ ಸಂವಿಧಾನ' ಎಂದರೆ, ಅಂದಿನ ಸ್ಪೀಕರ್ ಡಿ.ಬಿ. ಚಂದ್ರೇಗೌಡ 'ಶಾಸಕರುಗಳಿಗೆ ಉತ್ತಮ ಕೈಪಿಡಿ' ಎಂದರು. ನಾಡಿನ ಹಲವು ಕಡೆ ಸಭೆಗಳು ನಡೆದವು. ವಿವಿಧ ಕ್ಷೇತ್ರದ ಜನರ ಸಮಾವೇಶಗಳು ನಡೆದವು. ಕನ್ನಡ ಚಳವಳಿಯನ್ನು ವ್ಯಾಪಕವಾಗಿ ಪಸರಿಸುವಲ್ಲಿ 'ಕನ್ನಡ ಉಳಿಸಿ ವರ್ಷ' ನೆರವಾಯಿತು. ಇದು ರಾಯರ ಕನ್ನಡದ ಚಿಂತನೆಯ ಫಲಶ್ರುತಿ.

ಶೇಷಗಿರಿರಾಯರು ಕನ್ನಡ ಚಿಂತನೆಗಷ್ಟೇ ಸೀಮಿತವಾದವರಲ್ಲ. ನೇರ ಹೋರಾಟದ ನೇತೃತ್ವ ವಹಿಸಿದ ಪ್ರಸಂಗಗಳೂ ಇವೆ. ಅದರಲ್ಲಿ ಮುಖ್ಯವಾದದ್ದು ಹಿಂದಿ ಹೇರಿಕೆ ವಿರೋಧಿಸಿ ನಡೆದ ಹೋರಾಟ. ಹಿಂದಿ ಹೇರಿಕೆ ಮಿತಿ ಮೀರಿದಾಗ ಎಲ್‌ಎಸ್‌ಎಸ್ ಅವರ ಅಧ್ಯಕ್ಷತೆಯಲ್ಲಿ 'ಹಿಂದಿ ಸಾಮ್ರಾಜ್ಯಶಾಹಿ ವಿರೋಧಿ ಕ್ರಿಯಾಸಮಿತಿ' ರಚನೆಯಾಯಿತು. ಜನವರಿ 26ರ ಗಣರಾಜ್ಯದ ದಿನವನ್ನು 'ಹಿಂದಿ ಹೇರಿಕೆ ದಿನ'ವನ್ನಾಗಿ ಆಚರಿಸಲು ಆರಂಭಿಸಿತು. ಜನವರಿ 25, 1987ರಂದು ಹಿಂದಿ ಹೇರಿಕೆ ವಿರೋಧಿಸಿ ನಡೆದ ಸಭೆಯಲ್ಲಿ ಶಿವರಾಮ ಕಾರಂತ, ಬಿ.ಸಿ. ರಾಮಚಂದ್ರಶರ್ಮರಂತಹ ಗಣ್ಯರು ಪಾಲ್ಗೊಳ್ಳುವಂತೆ ಮಾಡಿದ ಹೆಗ್ಗಳಿಕೆ ರಾಯರದು. ಕೇಂದ್ರ ಸರ್ಕಾರದ ಕಚೇರಿ, ಬ್ಯಾಂಕ್ ಮುಂತಾದೆಡೆ ಹಿಂದಿ ಹೇರಿಕೆಯನ್ನು ವಿರೋಧಿಸಿ ಈ ಸಮಿತಿಯು ನಿರಂತರವಾಗಿ ಕೆಲವು ವರ್ಷಗಳು ಶಾಂತಿಯುತ ಪ್ರತಿಭಟನೆ ನಡೆಸಿತು.

ಇಲ್ಲಿ ಇನ್ನೊಂದು ಹೋರಾಟವನ್ನು ಪ್ರಸ್ತಾಪಿಸಬೇಕು. 2002ರಲ್ಲಿ ಕಾವೇರಿ ವಿವಾದ ವಿಕೋಪಕ್ಕೆ ಹೋಯಿತು. ಹೋರಾಟ ನಡೆಸುತ್ತಿದ್ದ ರೈತರು, ನಾಡಿನ ಪ್ರಜ್ಞಾವಂತರು ಏನೂ ಮಾಡುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದರು. ಚಿದಾನಂದಮೂರ್ತಿಯವರು ನೇಪಾಳಕ್ಕೆ ಹೋಗಿದ್ದರಿಂದ ನನ್ನಂತಹವರಿಗೆ ಏನು ಮಾಡುವುದು ಎಂಬ ಪೀಕಲಾಟ. ಆ ಸಂದರ್ಭದಲ್ಲಿ ಎಲ್‌ಎಸ್‌ಎಸ್ ಕರೆ ಮಾಡಿ, 'ರಾನಂ ಕಾವೇರಿ ಬಗ್ಗೆ ಇಷ್ಟೆಲ್ಲ ನಡೆಯುತ್ತಿರುವಾಗ ನಾವು ಸುಮ್ಮನಿರುವುದು ಸರಿಯಲ್ಲ. ಏನಾದರೂ ಮಾಡಲು ಸಾಧ್ಯವೇ? ಚಿಂತಿಸೋಣ, ಸಂಜೆ ಮನೆಗೆ ಬರಲು ಸಾಧ್ಯವೇ?' ಎಂದರು. ಸಂಜೆ 'ಕನ್ನಡ ಗೆಳೆಯರ ಬಳಗ'ದ ಕೆಲವರು ಅವರ ಮನೆಗೆ ಹೋದೆವು. ಕಿತ್ತೂರು ರಾಣಿ ಚೆನ್ನಮ್ಮ ಪ್ರತಿಮೆ ಎದುರು ಧರಣಿ ನಡೆಸುವ ನಿರ್ಧಾರವಾಯಿತು. ಅಂದೇ ಪತ್ರಿಕಾ ಹೇಳಿಕೆ ಬರೆದುಕೊಟ್ಟರು. ಆ ಧರಣಿಯಲ್ಲಿ ವಿವಿಧ ಕ್ಷೇತ್ರಗಳ 52 ಗಣ್ಯರು ಪಾಲ್ಗೊಂಡರು. ನಾಲ್ಕೇ ದಿನಗಳಲ್ಲಿ ಅಷ್ಟೊಂದು ಗಣ್ಯರು ಪಾಲ್ಗೊಳ್ಳುವಂತೆ ಮಾಡಿದ್ದು ಎಲ್‌ಎಸ್‌ಎಸ್ ಅವರ ಹಿರಿಮೆ. 'ಈ ಹೋರಾಟ ರೈತರಿಗೆ ಹೊಸ ಶಕ್ತಿ ತಂದು ಕೊಟ್ಟಿದೆ' ಎಂದು ಮಂಡ್ಯದ ಜಿ. ಮಾದೇಗೌಡರು ನುಡಿದರು.

ಪ್ರೊ. ಎಲ್.ಎಸ್. ಶೇಷಗಿರಿರಾವ್ ಅಂತಹವರ ಕನ್ನಡ ಕೆಲಸದ ಬಗ್ಗೆ ಎಷ್ಟು ಹೇಳಿದರೂ ಹೇಳಬೇಕಾದ ಸಂಗತಿಗಳಿರುತ್ತವೆ. ನಾನು ಕೆಲಸ ಮಾಡಿದ, ಮಾಡುತ್ತಿರುವ ಎಲ್ಲ ಸಂಘಟನೆಗಳಲ್ಲೂ ರಾಯರು ಇರುತ್ತಿದ್ದರು. ಅವರನ್ನು ತೀರಾ ಹತ್ತಿರದಿಂದ ಕಂಡ, ಸುಮಾರು ನಾಲ್ಕು ದಶಕಗಳ ಕಾಲ ಅವರ ಅಪ್ತ ವಲಯದಲ್ಲಿದ್ದ ನನಗೆ ಹೇಳುವುದು ಬಹಳಷ್ಟಿದೆ. ನೆನಪಿನಲ್ಲಿ ಉಳಿದಿರುವುದನ್ನಷ್ಟೇ ಹೇಳಿದರೂ ಅದು ಪುಸ್ತಕವಾಗಿ ಬಿಡುತ್ತದೆ. ಆ ಸಾಹಸಕ್ಕೆ ಮುಂದಾಗದೆ ಕೆಲವು ಘಟನೆಗಳನ್ನಷ್ಟೇ ದಾಖಲಿಸಿದ್ದೇನೆ.

ಅವರು ಹಲವು ಕನ್ನಡ ಚಿಂತನೆಯ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ 'ಕನ್ನಡದ ಅಳಿವುಉಳಿವು' ಮತ್ತು 'ಪ್ರಿಯ ಕನ್ನಡ ಬಂಧು' ಕನ್ನಡ ಕಾರ್ಯಕರ್ತರಿಗೆ ಮಾರ್ಗಸೂಚಿ ಗ್ರಂಥಗಳಾಗಿವೆ. ಕನ್ನಡದ ಸಾತ್ವಿಕ ಶಕ್ತಿಯಾಗಿದ್ದ ಎಲ್.ಎಸ್. ಶೇಷಗಿರಿರಾವ್ ಅವರ ಚಿಂತನೆ ಕನ್ನಡ ಅಭಿಮಾನಿಗಳಿಗೆ ಎಲ್ಲ ಕಾಲಕ್ಕೂ ದೀವಟಿಗೆಯಾಗಿರುತ್ತದೆ.



ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಗೌರವ ಸಮರ್ಪಣೆ ಸಮಾರಂಭದಲ್ಲಿ (ಏಪ್ರಿಲ್ 20, 1974) ಅಭಿನಂದಿತರಾದ ಎಲ್.ಎಸ್.ಎಸ್. ಅವರೊಂದಿಗೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಹಾಗೂ ಅಂದಿನ ಸಚಿವ ಎಚ್. ಸಿದ್ದವೀರಪ್ಪ

ಶ್ರೀರಂಗರೊಂದಿಗೆ ಎಲ್.ಎಸ್.ಎಸ್. ಹಾಗೂ ಚಂದ್ರಶೇಖರ ಕಂಬಾರರ ಒಂದು ಆಪ್ತಕ್ಷಣ. ಸಂದರ್ಭ: 'ಪ್ರಿಂಟರ್ಸ್ ಪ್ರಕಾಶನ' ಹೊರತಂದ ಚಂದ್ರಶೇಖರ ಕಂಬಾರರ 'ಸಿಂಗಾರೆವ್ವ ಮತ್ತು ಅರಮನೆ' ಕೃತಿ ಬಿಡುಗಡೆ ಸಮಾರಂಭ (ಜುಲೈ 2, 1982) / ಚಿತ್ರಗಳು: ಪ್ರಜಾವಾಣಿ ಆರ್ಕೈವ್ಸ್

